
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**







ಮೇಯರ್

# ಡಿ. ವೆಂಕಟೇಶ್ ಮೂರ್ತಿ

## ನಿಮ್ಮೊಂದಿಗೆ

### ಮೂರನೇ ತಿಂಗಳು





## ಮೂರನೇ ತಿಂಗಳು

# ನಿಮ್ಮೊಂದಿಗೆ

ಮಹಾಪೌರರಾದ

## ಶ್ರೀ ಡಿ. ವೆಂಕಟೇಶ್‌ಮೂರ್ತಿ

### ಜನಪರ ಹಾಗೂ ನಗರಾಭಿವೃದ್ಧಿಗೆ ಪೂರಕ ಬಜೆಟ್

ದಿ.28.06.2012ರಂದು ಮಂಡಿಸಲಾದ ಬಿಬಿಎಂಪಿಯ ಬಜೆಟ್ ಅನ್ನು ಜನಪರ ಹಾಗೂ ನಗರಾಭಿವೃದ್ಧಿಗೆ ಪೂರಕವಾಗಿ ರೂಪಿಸಲಾಗಿದೆ. 2012–13ನೇ ಸಾಲಿನಲ್ಲಿ ಪ್ರಾಥಮಿಕವಾಗಿ 9498.90 ಕೋಟಿ ರೂ. ಬಜೆಟ್ ಮಂಡಿಸಲಾಗಿತ್ತು. ನಂತರ 339 ಕೋಟಿ ರೂ. ಯೋಜನೆಗಳನ್ನು ಹೊಸದಾಗಿ ಸೇರಿಸಿ 9,837 ಕೋಟಿ ರೂ. ಪರಿಷ್ಕೃತ ಬಜೆಟ್ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಈ ಬಜೆಟ್‌ನಲ್ಲಿ ವಿವಿಧ ಕ್ಷೇತ್ರ ಮುಂದುವರಿದ ಹಾಗೂ ಹೊಸ ಕಾರ್ಯಕ್ರಮಗಳಿಗಾಗಿ ಪ್ರತ್ಯೇಕ ಹಣ ಮೀಸಲಿಟ್ಟಿದೆ. ಈ ಬಾರಿಯ ಬಜೆಟ್‌ನ ಪ್ರಮುಖಾಂಶಗಳು ಈ ಕೆಳಗಿನಂತಿವೆ.

- ಪ್ರಸಕ್ತ ಸಾಲಿನಲ್ಲಿ 2 ಸಾವಿರ ಕೋಟಿ ರೂ. ಆಸ್ತಿ ತೆರಿಗೆ ನಿರೀಕ್ಷಿಸಲಾಗಿದೆ.
- GIS ಪದ್ಧತಿ ಮೂಲಕ ಎಲ್ಲಾ ಆಸ್ತಿಗಳಿಗೂ ತೆರಿಗೆ ವಿಧಿಸಲಾಗುವುದು. ತೆರಿಗೆ ಆದಾಯದ ಜೊತೆಗೆ ತೆರಿಗೆಯೇತರ ಆದಾಯ ಹೆಚ್ಚಿಸಲು ಚಿಂತನೆ ನಡೆಸಲಾಗಿದೆ.
- OFC ಕೇಬಲ್ ಅಳವಡಿಕೆ ಸಂದರ್ಭದಲ್ಲಿ ಪ್ರತಿ ಮೀಟರ್ ರಸ್ತೆ ಅಗೆಯಲು ಇರುವ 300 ರೂ. ಶುಲ್ಕವನ್ನು 600ರೂ. ಗೆ ಹೆಚ್ಚಿಸಲು ನಿರ್ಧರಿಸಲಾಗಿದೆ.
- ಸೇವಾ ತೆರಿಗೆಯನ್ನು ಶೇ.25ರಿಂದ ಶೇ.50ಕ್ಕೇರಿಸಲು ಶಿಫಾರಸ್ಸು ಮಾಡಲಾಗಿದೆ.
- ಗುತ್ತಿಗೆ ನೀಡಲಾಗಿರುವ ಆಸ್ತಿಗಳ ಬಾಡಿಗೆ ಮೊತ್ತವನ್ನು ಶೇ. 100ರಷ್ಟು ಹೆಚ್ಚಿಸಲು ಚಿಂತನೆ.
- ಕ್ರೀಡೆ ಹೊರತುಪಡಿಸಿ ಇತರೆ ಸಮಾರಂಭಗಳಿಗೆ ಪಾಲಿಕೆ ಆಟದ ಮೈದಾನಗಳ ಬಾಡಿಗೆ ಮೊತ್ತವನ್ನು 50 ಸಾವಿರ ರೂ. ಗಳಿಗೆ ಹೆಚ್ಚಿಸಲು ನಿರ್ಧಾರ



ಬಸ್ ದಿನದಂದು ಮಹಾಪೌರರು ಪದ್ಮನಾಭನಗರದಿಂದ ಕೇಂದ್ರಕಛೇರಿಗೆ ಬಸ್‌ಮೂಲಕ ಪ್ರಯಾಣ ಬೆಳೆಸಿದರು




2012-13ರ ಬಜೆಟ್ ಮಂಡನೆ

### ➤ ನಗರದ ಅಷ್ಟದಿಕ್ಕುಗಳಲ್ಲಿ ಕೆಂಪೇಗೌಡ ಮಹಾದ್ವಾರ ನಿರ್ಮಾಣ

ನಗರದ ಕನಕಪುರ ರಸ್ತೆ, ಮೈಸೂರು ರಸ್ತೆ, ಮಾಗಡಿ ರಸ್ತೆ, ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಕೋಲಾರ ರಸ್ತೆ, ಹೊಸೂರು ರಸ್ತೆ ಮತ್ತು ಸರ್ಜಾಪುರ ರಸ್ತೆಗಳಲ್ಲಿ ಕೆಂಪೇಗೌಡ ಮಹಾದ್ವಾರಗಳ ನಿರ್ಮಾಣ ಮಾಡಲು ಐದು ಕೋಟಿ ರೂ. ಗಳನ್ನು ಮೀಸಲಿರಿಸಲಾಗಿದೆ.

### ➤ ಸ್ವಾಮಿ ವಿವೇಕಾನಂದರ ಪ್ರತಿಮೆ ಸ್ಥಾಪನೆ

ಯಡಿಯೂರು ಕೆರೆಯಲ್ಲಿ 34 ಅಡಿ ಎತ್ತರದ ಸ್ವಾಮಿ ವಿವೇಕಾನಂದರ ಕಂಚಿನ ಪ್ರತಿಮೆ ಸ್ಥಾಪನೆಗೆ 25 ಲಕ್ಷ ರೂ. ಗಳನ್ನು ನಿಗದಿಪಡಿಸಲಾಗಿದೆ.

### ➤ ರಾಣಿ ಚೆನ್ನಮ್ಮ ಆಟದ ಮೈದಾನ ಮೇಲ್ದರ್ಜೆಗೆ

ಕ್ರೀಡೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಬೈರಸಚಿದ್ರದಲ್ಲಿರುವ ರಾಣಿ ಚೆನ್ನಮ್ಮ ಆಟದ ಮೈದಾನವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಉನ್ನತೀಕರಿಸಲು 6 ಕೋಟಿ ರೂ. ಮೀಸಲು ಹಾಗೂ ಅದೇ ಮೈದಾನದಲ್ಲಿ ರಾಣಿ ಚೆನ್ನಮ್ಮ ಕಂಚಿನ ಪ್ರತಿಮೆ ಸ್ಥಾಪನೆಗೆ 1 ಕೋಟಿ ರೂ. ಅನುದಾನ ನೀಡಲಾಗಿದೆ.

### ➤ ಕಲ್ಯಾಣ ಕಾರ್ಯಕ್ರಮಗಳು

ಈ ಬಾರಿ ಆರ್ಥಿಕವಾಗಿ ಹಿಂದುಳಿದವರನ್ನು ಗಮನದಲ್ಲಿರಿಸಿಕೊಂಡು ಅವರ ಕಲ್ಯಾಣಕ್ಕಾಗಿ ಬಜೆಟ್‌ನಲ್ಲಿ ವಿಶೇಷ ಅನುದಾನಗಳನ್ನು ಯೋಜಿಲಾಗಿದೆ. ಈ ಯೋಜನೆಯ ಸಾಕಾರಕ್ಕಾಗಿ ಒಟ್ಟು 738 ಕೋಟಿ ರೂ. ತೆಗೆದಿರಿಸಲಾಗಿದೆ.

### ➤ ಉಚಿತ ಗ್ಯಾಸ್ ಸಂಪರ್ಕ

ಇದರ ಅಡಿಯಲ್ಲಿ ಮಾಜಿ ಸಚಿವ ದಿ. ಡಾ.ವಿ.ಎಸ್.ಆಚಾರ್ಯ ಅವರ ನೆನಪಿನಲ್ಲಿ ಅನಿಲ ಸಂಪರ್ಕ ಕಾರ್ಯಕ್ರಮವನ್ನು ಪರಿಚಯಿಸಲಾಗಿದೆ. ಪ್ರತಿ ವಾರ್ಡ್‌ನಲ್ಲಿ ಆರ್ಥಿಕವಾಗಿ ಹಿಂದುಳಿದ ಅರ್ಹ ನೂರು ಕುಟುಂಬಗಳ ಫಲಾನುಭವಿಗಳನ್ನು ಗುರುತಿಸಿ, ಅಡುಗೆ ಅನಿಲ ಸಂಪರ್ಕ ಕಲ್ಪಿಸಲು ಉದ್ದೇಶಿಸಿದ್ದು, ಇದಕ್ಕಾಗಿ 100 ಕೋಟಿ ರೂ. ಮೀಸಲಿಟ್ಟಿದೆ.

### ➤ ಆರ್ಥಿಕವಾಗಿ ಹಿಂದುಳಿದವರಿಗೆ ಹಾಗೂ ಪರಿಶಿಷ್ಟ ವರ್ಗ ಹಾಗೂ ಪಂಗಡದ ಕುಟುಂಬಗಳಿಗೆ ವಸತಿ

ಪರಿಶಿಷ್ಟ ವರ್ಗ ಹಾಗೂ ಪಂಗಡದ ಕುಟುಂಬಗಳಿಗೆ ಡಾ.ಬಿ.ಆರ್.ಅಂಬೇಡ್ಕರ್ ಗೃಹ ನಿರ್ಮಾಣ ಯೋಜನೆ ಅಡಿ 14,750 ಮನೆಗಳನ್ನು ನಿರ್ಮಿಸಿಕೊಡಲು ಉದ್ದೇಶಿಸಿದ್ದು ಪ್ರಸಕ್ತ ಸಾಲಿನಲ್ಲಿ 3,104 ಮನೆ ನಿರ್ಮಾಣ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಪಂಡಿತ್ ದೀನದಯಾಳ್ ಉಪಾಧ್ಯಾಯ ಹೆಸರಿನಲ್ಲಿ 9900 ಮನೆಗಳನ್ನು ನಿರ್ಮಿಸಲು ಯೋಜಿಸಿದ್ದು ಪ್ರತಿ ವಾರ್ಡ್‌ನಲ್ಲಿ 50 ಮನೆಗಳ ನಿರ್ಮಾಣ ಮಾಡಲಾಗುವುದು.

### ➤ ಮಹಿಳೆಯರ ವಾರ್ಡ್‌ಗೆ 5 ಲಕ್ಷ

ಖ್ಯಾತ ಗಗನ ಯಾತ್ರಿ ದಿ. ಕಲ್ಪನಾ ಚಾವ್ಲಾ ಅವರ ನೆನಪಿನಲ್ಲಿ ಮಹಿಳೆಯರಿಗೆ ಸಾಮಾಜಿಕ ಹಾಗೂ ಶೈಕ್ಷಣಿಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ಮಹಿಳಾ ಸದಸ್ಯರು ಪ್ರತಿನಿಧಿಸುವ ವಾರ್ಡ್‌ಗಳಿಗೆ ತಲಾ 5 ಲಕ್ಷ ರೂ. ಅನುದಾನ ನೀಡಲಾಗುವುದು. ಇದಕ್ಕಾಗಿ ಒಟ್ಟು 3.50 ಕೋಟಿ ರೂ. ಅನುದಾನ ನಿಗದಿಪಡಿಸಲಾಗಿದೆ.

### ➤ ಬಾಲಕಿಯರಿಗೆ ಉಚಿತ ಆರೋಗ್ಯ ಕಿಟ್

ಪಾಲಿಕೆಯ ಶಾಲಾ-ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಾಲಕಿಯರಿಗೆ ಆರೋಗ್ಯ ಹಾಗೂ ಶುಚಿತ್ವ ಕಾಪಾಡಿಕೊಳ್ಳಲು ಅಗತ್ಯ ಪರಿಕರಗಳನ್ನು ಹೊಂದಿರುವ ಕಿಟ್ ಅನ್ನು ಉಚಿತವಾಗಿ ನೀಡಲಿದೆ. ಇದಕ್ಕಾಗಿ 2 ಕೋಟಿ ರೂ. ಮೀಸಲಿಡಲಾಗಿದೆ.

### ➤ ಗರ್ಭಿಣಿಯರಿಗೆ ಉಚಿತ ಸ್ಕ್ಯಾನಿಂಗ್

ಪಾಲಿಕೆಯ ಹೆರಿಗೆ ಮತ್ತು ರೆಫರಲ್ ಆಸ್ಪತ್ರೆಗಳಿಗೆ ಹೋಗುವ ಗರ್ಭಿಣಿಯರಿಗೆ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಸೇವೆಯನ್ನು ಉಚಿತವಾಗಿ ಕಲ್ಪಿಸಲು ತೀರ್ಮಾನಿಸಲಾಗಿದೆ. ಈ ಕೇಂದ್ರಗಳ ಉನ್ನತೀಕರಣಕ್ಕೆ 5 ಕೋಟಿ ರೂ. ತೆಗೆದಿರಿಸಲಾಗಿದೆ.

### ➢ ರೋಗಿಗಳಿಗೆ ಡಯಾಲಿಸಿಸ್ ಕೇಂದ್ರ

ಮಧುಮೇಹ, ರಕ್ತದೊತ್ತಡದಂತಹ ಕಾಯಿಲೆಗೆ ಈಗಾಗಲೇ 'ಹೊಂಗಿರಣ' ಯೋಜನೆಯಡಿ ಒದಗಿಸುತ್ತಿರುವ ಡಯಾಲಿಸಿಸ್ ಚಿಕಿತ್ಸೆಯನ್ನು ಪಾಲಿಕೆಯ ಎಲ್ಲಾ ವಲಯಗಳಿಗೆ ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ವಿಸ್ತರಿಸಲಾಗುತ್ತಿದ್ದು 6 ಕೋಟಿ ರೂ. ನೀಡಲಾಗುವುದು.

### ➢ ಜೆ.ಸಿ.ಬೋಸ್ ನಿತ್ಯ ಆರೋಗ್ಯ ಸೇವೆ

ಪ್ರಾಥಮಿಕ ಹಂತದಲ್ಲೇ ಕಾಯಿಲೆಗಳನ್ನು ಗುಣಪಡಿಸಲು ಸೂಕ್ತ ಚಿಕಿತ್ಸೆ ವ್ಯವಸ್ಥೆಗಾಗಿ ಪ್ರತಿ ವಾರ್ಡ್‌ನಲ್ಲಿ 'ಜಗದೀಶ್‌ಚಂದ್ರ ಬೋಸ್ – ನಿತ್ಯ ಆರೋಗ್ಯ ಸೇವೆ' ಉಚಿತ ಪರೀಕ್ಷಾ ಕೇಂದ್ರವನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಪ್ರತಿ ವಾರ್ಡ್‌ಗೆ 10 ಲಕ್ಷ ರೂ. ನಂತೆ ಒಟ್ಟು 20 ಕೋಟಿ ರೂ. ಮೀಸಲಿರಿಸಲಾಗಿದೆ.

### ➢ ಪಾಲಿಕೆ ಶಾಲಾ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ

ಪಾಲಿಕೆ ಶಾಲೆ ವಿದ್ಯಾರ್ಥಿಗಳು ಖಾಸಗಿ ಶಾಲೆಯ ವಿದ್ಯಾರ್ಥಿಗಳ ಜೊತೆ ಸ್ಪರ್ಧಿಸುವಂತೆ ಮಾಡಲು ವ್ಯಕ್ತಿತ್ವ ವಿಕಸನ ಮತ್ತು ತಾಂತ್ರಿಕ ಪರಿಣಿತಿ ಕಾರ್ಯಕ್ರಮ ಹಮ್ಮಿಕೊಳ್ಳಲು 'ಸಬಲ' ಯೋಜನೆ ರೂಪಿಸಿದ್ದು 50 ಲಕ್ಷ ರೂ. ಮೀಸಲಿರಿಸಲಾಗಿದೆ.

### ➢ ನೇಕಾರರು, ಆಟೋ ಚಾಲಕರು ಹಾಗೂ ಬೀದಿಬದಿಯ ವ್ಯಾಪಾರಿಗಳಿಗೆ ನೆರವು

ನಶಿಸಿ ಹೋಗುತ್ತಿರುವ ನೇಕಾರಿಕೆಯನ್ನು ಪುನರುಜ್ಜೀವನಗೊಳಿಸಲು 'ಮಹಾತ್ಮಗಾಂಧಿ ಸ್ವಾವಲಂಬನಾ ಯೋಜನೆ'ಯಡಿ ಯುವ ನೇಕಾರರಿಗೆ ತರಬೇತಿ ಹಾಗೂ ಸ್ವಯಂ ಉದ್ಯೋಗಕ್ಕೆ ಬಂಡವಾಳ ಒದಗಿಸಲು ನಿರ್ಧರಿಸಲಾಗಿದ್ದು ಪ್ರಸಕ್ತ ಸಾಲಿನಲ್ಲಿ 500 ನೇಕಾರರಿಗೆ ಆರ್ಥಿಕ ನೆರವು ನೀಡಲಾಗುವುದು. ಇದಕ್ಕಾಗಿ 5 ಕೋಟಿ ರೂ. ಮೀಸಲಿರಿಸಲಾಗಿದೆ. ಅಂತೆಯೇ ಬೀದಿ ಬದಿಯ ವ್ಯಾಪಾರಿಗಳಿಗೆ ತಳ್ಳುಗಾಡಿ ಖರೀದಿಸಲು ಆರ್ಥಿಕವಾಗಿ ನೆರವಾಗುವ ಉದ್ದೇಶದಿಂದ 5 ಕೋಟಿ ರೂ. ತೆಗೆದಿರಿಸಲಾಗಿದೆ. ವಾರ್ಡ್‌ವಾರು ವ್ಯಾಪಾರಿಗಳ ಪಟ್ಟಿ ಪಡೆದು ಅರ್ಹ ವ್ಯಾಪಾರಿಗಳಿಗೆ ಆರ್ಥಿಕ ನೆರವು ನೀಡಲಾಗುವುದು.

ಸರ್ಕಾರ ನೂತನವಾಗಿ ಜಾರಿಗೊಳಿಸಿರುವ ಎಲೆಕ್ಟ್ರಾನಿಕ್ ಡಿಜಿಟಲ್ ಮೀಟರ್ ಅಳವಡಿಸಿಕೊಳ್ಳಲು ಬಡ ಆಟೋರಿಕ್ಷಾ ಚಾಲಕರಿಗೆ ಆರ್ಥಿಕ ನೆರವು ನೀಡಲಾಗುತ್ತದೆ. ಬಡತನದಿಂದ ನೂತನ ಡಿಜಿಟಲ್ ಮೀಟರ್ ಅಳವಡಿಸಿಕೊಳ್ಳಲು ಸಾಮರ್ಥ್ಯವಿಲ್ಲದ ಚಾಲಕರನ್ನು ಗುರುತಿಸಿ 'ಸಾರಥಿ' ಕಾರ್ಯಕ್ರಮದ ಅಡಿಯಲ್ಲಿ ಮೀಟರ್ ಬದಲಾವಣೆಗೆ ತಗಲುವ ವೆಚ್ಚವನ್ನು ನೀಡಲಾಗುವುದು.



ಉಪಮುಖ್ಯಮಂತ್ರಿ ಆರ್. ಅಶೋಕ್‌ರೊಂದಿಗೆ ಮಹಾಪೌರರು



### ➢ ಕಸದಿಂದ ರಸ

13ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ 200 ಕೋಟಿ ರೂ. ವೆಚ್ಚದಲ್ಲಿ ಕಸ ವಿಲೇವಾರಿ ಯೋಜನೆಗೆ ತೀರ್ಮಾನಿಸಲಾಗಿದ್ದು 198 ವಾರ್ಡ್‌ಗಳಲ್ಲೂ ಒಣ ಕಸ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು. 15 ಕಾಂಪ್ಯಾಕ್ಟರ್, 2 ಮೆಕ್ಯಾನಿಕಲ್ ಸ್ವೀಪಿಂಗ್ ಯಂತ್ರ ಹಾಗೂ 2 ಸಣ್ಣ ಮೆಕ್ಯಾನಿಕಲ್ ಸ್ವೀಪಿಂಗ್ ಯಂತ್ರಗಳನ್ನು ಖರೀದಿಸಲಾಗುವುದು. 20 ಸ್ಥಳಗಳಲ್ಲಿ 5 ಟನ್ ಸಾಮರ್ಥ್ಯದ ಬಯೋಗ್ಯಾಸ್ ಘಟಕ ಹಾಗೂ ವಿಕೇಂದ್ರಿತ ಸಾವಯವ ಗೊಬ್ಬರ ಘಟಕಗಳ ಸ್ಥಾಪನೆಗೆ ತೀರ್ಮಾನಿಸಲಾಗಿದೆ. ಆನೇಕಲ್ ತಾಲೂಕಿನ ಬಗ್ಗನದೊಡ್ಡಿ ಗ್ರಾಮದಲ್ಲಿ ಪ್ರತಿದಿನ 1 ಸಾವಿರ ಮೆಟ್ರಿಕ್ ಟನ್ ಹಾಗೂ ಕನ್ನಹಳ್ಳಿ ಗ್ರಾಮದಲ್ಲಿ 600 ಮೆಟ್ರಿಕ್ ಟನ್ ತ್ಯಾಜ್ಯ ಸಂಸ್ಕರಿಸಿ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಯೋಜಿಸಲಾಗಿದೆ.

### ➢ ಕೆರೆ ಅಭಿವೃದ್ಧಿ

ಪಾಲಿಕೆ ಸುಪರ್ದಿಯಲ್ಲಿರುವ 55 ಕೆರೆಗಳ ಪೈಕಿ 17 ಕೆರೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಉಳಿದ 38 ಕೆರೆಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ. ಈ ಸಂಬಂಧ ಬಜೆಟ್‌ನಲ್ಲಿ 200 ಕೋಟಿ ರೂ. ಮೀಸಲಿಡಲಾಗಿದೆ. ಅಂತರ್ಜಲ ಮಟ್ಟ ಹೆಚ್ಚಿಸಲು ಸಹಕಾರಿಯಾಗಲಿದೆ.

### ➢ ಬಾನಾಡಿ ಮರಳಿ ಬಾ ಗೂಡಿಗೆ

ಬೇಸಿಗೆ ವೇಳೆ ನೀರಿನ ಅಭಾವದಿಂದ ನಗರದಲ್ಲಿ ನಶಿಸಿ ಹೋಗುತ್ತಿರುವ ಅಪರೂಪದ ಪಕ್ಷಿ ಸಂಕುಲಗಳನ್ನು ಸಚಿರಕ್ಷಿಸುವ ನಿಟ್ಟಿನಲ್ಲಿ ಈ ಯೋಜನೆ ರೂಪಿಸಲಾಗಿದ್ದು 3.50 ಕೋಟಿ ರೂ. ಮೀಸಲಿರಿಸಲಾಗಿದೆ.

### ➢ 5 ಸಿಗ್ನಲ್‌ಮುಕ್ತ ಕಾರಿಡಾರ್

ರಾಜ್ಯ ಸರ್ಕಾರ ಘೋಷಿಸಿರುವ ಅನುದಾನದ ಅಡಿಯಲ್ಲಿ ನಗರದಲ್ಲಿ 52.5 ಕಿ.ಮೀ ಉದ್ದದ ಐದು ಸಿಗ್ನಲ್‌ಮುಕ್ತ ಕಾರಿಡಾರ್‌ಗಳ ನಿರ್ಮಾಣಕ್ಕೆ 618 ಕೋಟಿ ರೂ. ಮೊತ್ತದ ಯೋಜನೆ ರೂಪಿಸಿದ್ದು, ಪ್ರಸಕ್ತ ಸಾಲಿನಲ್ಲಿ 426 ಕೋಟಿ ರೂ. ಕಾಯ್ದಿರಿಸಲಾಗಿದೆ.

### ➢ 5 ಗ್ರೇಡ್ ಸಪರೇಟರ್

195 ಕೋಟಿ ರೂ. ವೆಚ್ಚದಲ್ಲಿ ಐದು ಪ್ರಮುಖ ಜಂಕ್ಷನ್‌ಗಳಾದ ಮಲ್ಲೇಶ್ವರಂ ಮಾರಮ್ಮ ವೃತ್ತ, ಮಾಗಡಿ ರಸ್ತೆ – ಬಸವೇಶ್ವರನಗರ ಜಂಕ್ಷನ್, ರಾಜಾಜಿನಗರ 10 ಅಡಿ ರಸ್ತೆ ಜಂಕ್ಷನ್, ಶಿವಾನಂದ ವೃತ್ತದ ಉಕ್ಕಿನ ಮೇಲುಸೇತುವೆ, ಶಿವನಗರ 8ನೇ ಮುಖ್ಯರಸ್ತೆ ಹಾಗೂ ಕಾರ್ಡ್ ರಸ್ತೆ ಕೂಡುವ ಜಂಕ್ಷನ್‌ಗಳಲ್ಲಿ ಗ್ರೇಡ್ ಸಪರೇಟರ್ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ 85.20 ಕೋಟಿ ರೂ. ತೆಗೆದಿರಿಸಲಾಗಿದೆ.

200 ಕೋಟಿ ರೂ. ಮೊತ್ತದಲ್ಲಿ 73.5 ಕಿ.ಮೀ. ಉದ್ದದ 45 ಪ್ರಮುಖ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು.

## ಕೊಳಗೇರಿ ಜನರಿಗೆ ಹಕ್ಕುಪತ್ರ ವಿತರಣೆ

ಬನಶಂಕರಿ ವಾರ್ಡ್ ವ್ಯಾಪ್ತಿಯ ಪ್ರಗತಿಪುರ ಹಾಗೂ ಹರಿ ಕಾಲೋನಿ ಕೊಳಚೆ ಪ್ರದೇಶದ ಸುಮಾರು 857 ಮಂದಿ ನಿವಾಸಿಗಳಿಗೆ ಬಿಬಿಎಂಪಿ ವತಿಯಿಂದ ಹಕ್ಕುಪತ್ರ ವಿತರಿಸಲಾಯಿತು. ಕಳೆದ ವರ್ಷ ನೀಡಿದ್ದ ವಾಗ್ದಾನದಂತೆ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲಾಯಿತು. ಇದೇ ಸಂದರ್ಭದಲ್ಲಿ ವಿವಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ವಾರ್ಡ್‌ನ 10 ಮಂದಿಯನ್ನು ಗೌರವಿಸಲಾಯಿತು. ಆರು ಮಂದಿ ಅಂಗವಿಕಲರಿಗೆ 65 ಸಾವಿರ ರೂ. ಗಳ ಮೌಲ್ಯದ ತ್ರಿಚಕ್ರ ಆಕ್ಟೀವ್ ವಿತರಿಸಲಾಯಿತು. ಕ್ಷೇತ್ರ ವ್ಯಾಪ್ತಿಯ 56 ದೇವಾಲಯಗಳಿಗೆ ಕಬ್ಬಿಣದ ಬೀರುಗಳನ್ನು ವಿತರಿಸಲಾಗುತ್ತಿದೆ. ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 1000ಮಂದಿ ಆಟೋಚಾಲಕರಿಗೆ ಸಮವಸ್ತ್ರಗಳನ್ನು ಹಾಗೂ 15 ಸಾವಿರ ಬಡವಿದ್ಯಾರ್ಥಿಗಳಿಗೆ 56,000 ನೋಟ್‌ಬುಕ್‌ಗಳನ್ನು ವಿತರಿಸಲಾಯಿತು.

## ಪರಿಶಿಷ್ಟರಿಗೆ ಅಡುಗೆ ಅನಿಲ ಸಂಪರ್ಕ ನೀಡಿಕೆ

ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದ ಬಡವರಿಗೆ ಉಚಿತ ಅಡುಗೆ ಅನಿಲ ಸಂಪರ್ಕ ನೀಡುವ ಮಹತ್ವಾಕಾಂಕ್ಷಿ ಯೋಜನೆಗೆ ಶ್ರೀ ಸಿದ್ದಗಂಗಾ ಮಠಾಧೀಶರಾದ ಶ್ರೀ ಶಿವಕುಮಾರ ಸ್ವಾಮಿಗಳು ದಯಾನಂದ ನಗರ ವಾರ್ಡ್‌ನಲ್ಲಿ ಚಾಲನೆ ನೀಡಿದರು. ಅರ್ಹ ಫಲಾನುಭವಿಗಳನ್ನು ಗುರುತಿಸಿ ಹಂತಹಂತವಾಗಿ ಯೋಜನೆ ಅಡುಗೆ ಅನಿಲ ಸಂಪರ್ಕ ಕಲ್ಪಿಸಲಾಗುವುದು.

## ಸೇವಾ ಕೇಂದ್ರ ಕಟ್ಟಡ ನಿರ್ಮಾಣ

ನಗರದಲ್ಲಿ ಕಂಡುಬರುವ ರಾತ್ರಿ ಸಮಯದ ವಸತಿರಹಿತರ ಪುನಶ್ಚೇತನಕ್ಕಾಗಿ ಆರಂಭಿಸಲಾಗಿರುವ ನಾಗರೀಕ ಸೇವಾ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಬನ್ನೇರುಘಟ್ಟ ರಸ್ತೆಯ ಹುಳಿಮಾವು ಗ್ರಾಮದಲ್ಲಿ 1.28 ಎಕರೆ ಜಾಗ ಗುರುತಿಸಲಾಗಿದೆ ಹಾಗೂ ರಾಜ್ಯ ಸರ್ಕಾರ ಈ ಸಂಬಂಧ 9 ಕೋಟಿ ರೂ. ಮಂಜೂರು ಮಾಡಿದೆ. ಬೆಂಗಳೂರು ಮಹಾನಗರದಲ್ಲಿ ಈಗಾಗಲೇ 13 ಸೇವಾಕೇಂದ್ರಗಳನ್ನು ತೆರೆಯಲಾಗಿದ್ದು ವಸತಿ ರಹಿತರಿಗೆ ಅಗತ್ಯ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಈ ಕೇಂದ್ರಗಳ ನಿರ್ವಹಣೆಗಾಗಿ ವಾರ್ಷಿಕ 5 ಕೋಟಿ ರೂ. ತೆಗೆದಿರಿಸಲಾಗಿದೆ.



ಡೆಂಗ್ಯೂ ಜ್ವರದ ಕುರಿತು ಪತ್ರಿಕಾ ಗೋಷ್ಠಿ ನಡೆಸುತ್ತಿರುವುದು

## ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿ ದಾಸಪ್ಪ ಆಸ್ಪತ್ರೆ

ಬಿಬಿಎಂಪಿ ಸಿಬ್ಬಂದಿ ಮತ್ತು ಅಧಿಕಾರಿಗಳು, ಪಾಲಿಕೆ ಸದಸ್ಯರು ಚಿಕಿತ್ಸೆ ಪಡೆಯುವ ನಿಟ್ಟಿನಲ್ಲಿ ಪಾಲಿಕೆಯ ದಾಸಪ್ಪ ಆಸ್ಪತ್ರೆಯನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ತೀರ್ಮಾನಿಸಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಪಾಲಿಕೆ ಸಿಬ್ಬಂದಿಗಾಗಿ ಪ್ರತಿವರ್ಷ 4 ಕೋಟಿರೂ.ಗಳನ್ನು ವೈದ್ಯಕೀಯ ವೆಚ್ಚಕ್ಕಾಗಿ ವ್ಯಯ ಮಾಡಲಾಗುತ್ತಿದೆ. ಪಾಲಿಕೆಯ ಸ್ವಂತದ್ದೇ ಆದ ಅತ್ಯಾಧುನಿಕ ಆಸ್ಪತ್ರೆಯನ್ನು ಹೊಂದಿದ್ದರೆ ಇಲ್ಲಿಯೇ ಎಲ್ಲಾ ಸೌಕರ್ಯಗಳನ್ನು ನೌಕರರಿಗೆ ಒದಗಿಸಬಹುದಾಗಿದೆ. ಈ ನಿಟ್ಟಿನಲ್ಲಿ ಪುರಭವನದ ಸಮೀಪದಲ್ಲಿಯೇ ಇರುವ ದಾಸಪ್ಪ ಆಸ್ಪತ್ರೆಯ ಖಾಸಗಿ ಸಹಭಾಗಿತ್ವದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

## ಪೌರ ಕಾರ್ಮಿಕರಿಗೆ ವಸತಿ ಯೋಜನೆ

ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 6 ಸಾವಿರ ಪೌರ ಕಾರ್ಮಿಕರಿಗೆ ವಸತಿ ಯೋಜನೆ ಕಲ್ಪಿಸುವ ನಿಟ್ಟಿನಲ್ಲಿ ಬಿಡಿಎ ನಿರ್ಮಿಸುತ್ತಿರುವ 1 ಸಾವಿರ ಮನೆಗಳನ್ನು ಕಲ್ಯಾಣ ಯೋಜನೆ ಅಡಿಯಲ್ಲಿ ಖರೀದಿಸಲು ಚಿಂತನೆ ನಡೆಸಲಾಗಿದೆ. ಜೊತೆಗೆ ನಿವೇಶನ ಒದಗಿಸಿದರೆ ಪೌರ ಕಾರ್ಮಿಕರ ಮನೆ ನಿರ್ಮಾಣದ ಸಂಪೂರ್ಣ ಹೊಣೆಯನ್ನು ಹೊರುವ ಕೇಂದ್ರ ಸರ್ಕಾರದ ಪ್ರಸ್ತಾವನೆಗೆ ಸೂಕ್ತವಾಗಿ ಪ್ರಾಮಾಣಿಕವಾಗಿ ಸ್ಪಂದಿಸಲಾಗುವುದು.



ಅಧಿಕಾರಿಗಳೊಂದಿಗೆ ಸಭೆ



## ಶ್ರದ್ಧಾಂಜಲಿ ಕಲಶಕ್ಕೆ ಚಾಲನೆ

ಕಾರ್ಗಿಲ್ ವಿಜಯೋತ್ಸವ ಪ್ರಯುಕ್ತ ಜು. 26ರಂದು ಕಾರ್ಗಿಲ್‌ನಲ್ಲಿ ನಡೆದ 'ಶ್ರದ್ಧಾಂಜಲಿ ಸಪ್ತಾಹ'ದ 'ಶ್ರದ್ಧಾಂಜಲಿ ಕಲಶಕ್ಕೆ' 21.07.2012ರಂದು ಚಾಲನೆ ನೀಡಲಾಯಿತು. ದೇಶದ 21 ಪವಿತ್ರ ನದಿಗಳ ಜಲ, 21 ರಾಷ್ಟ್ರೀಯ ಹೂಗಳನ್ನು ಕಾರ್ಗಿಲ್ ಹುತಾತ್ಮರಿಗೆ ಅರ್ಪಿಸುವ ಸಲುವಾಗಿ ಶ್ರದ್ಧಾಂಜಲಿ ಕಳಶವನ್ನು ಕಳುಹಿಸಲಾಗಿತ್ತು. ಕರ್ನಾಟಕದ ಕಾವೇರಿ ನೀರನ್ನು ಕಲಶಕ್ಕೆ ಸಮರ್ಪಿಸಲಾಯಿತು. ಜು. 26ರಂದು ಕಾರ್ಗಿಲ್ ಸ್ಥಳದಲ್ಲಿ ಜಲವನ್ನು ಸಿಂಪಡಿಸಲಾಯಿತು.

## ಪೌರ ಕಾರ್ಮಿಕರಿಗೆ ವಸತಿ ಯೋಜನೆ

ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 6 ಸಾವಿರ ಪೌರ ಕಾರ್ಮಿಕರಿಗೆ ವಸತಿ ಯೋಜನೆ ಕಲ್ಪಿಸುವ ನಿಟ್ಟಿನಲ್ಲಿ ಬಿಡಿಎ ನಿರ್ಮಿಸುತ್ತಿರುವ 1 ಸಾವಿರ ಮನೆಗಳನ್ನು ಕಲ್ಯಾಣ ಯೋಜನೆ ಅಡಿಯಲ್ಲಿ ಖರೀದಿಸಲು ಚಿಂತನೆ ನಡೆಸಲಾಗಿದೆ. ಜೊತೆಗೆ ನಿವೇಶನ ಒದಗಿಸಿದರೆ ಪೌರ ಕಾರ್ಮಿಕರ ಮನೆ ನಿರ್ಮಾಣದ ಸಂಪೂರ್ಣ ಹೊಣೆಯನ್ನು ಹೊರುವ ಕೇಂದ್ರ ಸರ್ಕಾರದ ಪ್ರಸ್ತಾವನೆಗೆ ಸೂಕ್ತವಾಗಿ ಪ್ರಾಮಾಣಿಕವಾಗಿ ಸ್ಪಂದಿಸಲಾಗುವುದು.

## ತ್ಯಾಜ್ಯ ವಿಲೇವಾರಿ ಘಟಕ ಗ್ರಾಮಸ್ಥರ ಸಮಸ್ಯೆ ನಿವಾರಣೆಗೆ ಕ್ರಮ

ಮಾವಳ್ಳಿಪುರ ತ್ಯಾಜ್ಯ ವಿಲೇವಾರಿ ಘಟಕದಿಂದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಆಗುತ್ತಿರುವ ತೊಂದರೆಗಳ ನಿವಾರಣೆಗಾಗಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ದಲಿತ ಸಂಘರ್ಷ ಸಮಿತಿಯ ಸದಸ್ಯರೊಂದಿಗೆ ಸಭೆ ನಡೆಸಲಾಯಿತು. ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ವೈದ್ಯಕೀಯ ಚಿಕಿತ್ಸೆ, ಕಾಯಿಲೆಯಿಂದ ಬಳಲಿ ನೊಂದವರಿಗೆ ಪರಿಹಾರಧನ ಮುಂತಾದ ವಿಷಯಗಳ ಕುರಿತು ಪರಿಶೀಲನೆ ನಡೆಸಲಾಯಿತು. ತ್ಯಾಜ್ಯ ವಿಲೇವಾರಿ ಘಟಕದಿಂದ ಗ್ರಾಮಸ್ಥರ ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮಗಳಿಂದ ಅನಾರೋಗ್ಯ ಪೀಡಿತರಾಗಿರುವವರಿಗೆ ತುರ್ತು ಚಿಕಿತ್ಸೆ ನೀಡಲು ಹಾಗೂ ಆಗಾಗ್ಗೆ ಆರೋಗ್ಯ ಶಿಬಿರ ಕೂಡ ನಡೆಸಲು ಆರೋಗ್ಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ತ್ಯಾಜ್ಯ ವಿಲೇವಾರಿ ಸಂಬಂಧ ಮೆ.ರಾಮ್ಕಿ ಸಂಸ್ಥೆಯವರೊಂದಿಗೆ ಮಾಡಿಕೊಂಡಿರುವ ಪ್ರಕಾರ ಅವರು ಪ್ರಾರಂಭಿಸಿರುವ ಘಟಕದಲ್ಲಿ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಅದರಂತೆ ನಡೆದುಕೊಳ್ಳದಿದ್ದಲ್ಲಿ ಅವರ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಶೀಘ್ರದಲ್ಲೇ ಮತ್ತೊಮ್ಮೆ ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರ ಸಮಸ್ಯೆಗಳನ್ನು ಹಾಗೂ ಬೇಡಿಕೆಗಳನ್ನು ಆಲಿಸಿ, ಕೂಲಂಕುಷವಾಗಿ ಪರಿಶೀಲಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುವುದು.



## ಪುಟ್ಟಣ್ಣ ಕಣಗಾಲ್ ಚಿತ್ರಮಂದಿರಕ್ಕೆ ಮರುಜೀವ

ಹಲವು ವರ್ಷಗಳಿಂದ ನಾನಾ ಕಾರಣಗಳಿಂದ ಸ್ಥಗಿತಗೊಂಡಿದ್ದ ಪುಟ್ಟಣ್ಣ ಕಣಗಾಲ್ ಚಿತ್ರಮಂದಿರ ಕಟ್ಟಡದ ಪುನರ್‌ನಿರ್ಮಾಣ ಕಾರ್ಯ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಚಿತ್ರಮಂದಿರ ಈಗಿರುವ ಸ್ಥಳದಲ್ಲಿ ಐದು ಅಂತಸ್ತಿನ ಕಟ್ಟಡವನ್ನು ಸುಮಾರು 119 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು. ಕಟ್ಟಡ ಪೂರ್ಣಗೊಂಡ ನಂತರತರಕಾರಿ–ಹಣ್ಣು ಮಾರುಕಟ್ಟೆ, ಬ್ಯಾಂಕ್‌ಗೆ ಬಾಡಿಗೆ ನೀಡಲಾಗುತ್ತದೆ. ಜೊತೆಗೆ ಎರಡು ಥಿಯೇಟರ್/ಸಭಾಂಗಣ ನಿರ್ಮಿಸಲಾಗುವುದು. ಹಾಗೆಯೇ ಈ ಭಾಗದಲ್ಲಿನ ಪಾರ್ಕಿಂಗ್ ಸಮಸ್ಯೆಗೆ ಮುಕ್ತಿ ನೀಡುವ ದೃಷ್ಟಿಯಿಂದ ಸುಮಾರು 700 ಕಾರುಗಳು ಮತ್ತು ಅನುಗುಣವಾಗಿ ದ್ವಿಚಕ್ರವಾಹನ ನಿಲುಗಡೆಗಾಗಿ ಎರಡು ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಎರಡು ವರ್ಷಗಳಲ್ಲಿ ಕಟ್ಟಡ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ.

## ಬಸ್ ದಿನದ ಅಂಗವಾಗಿ ಬಸ್‌ನಲ್ಲಿ ಪ್ರಯಾಣ

ಬೆಂಗಳೂರು ನಗರದಲ್ಲಿ ಟ್ರಾಫಿಕ್ ಸಮಸ್ಯೆ ಹಾಗೂ ಮಾಲಿನ್ಯ ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಬಿಎಂಟಿಸಿ ಪ್ರಾರಂಭಿಸಿರುವ ಬಸ್‌ದಿನದ ಅಂಗವಾಗಿ ಪದ್ಮನಾಭನಗರದಿಂದ ಬಿಎಂಟಿಸಿ ಕೇಂದ ್ರಕಚೇರಿಯವರೆಗೆ ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣ ಮಾಡಲಾಯಿತು.

## ಡೆಂಗೆ, ಚಿಕೂನ್‌ಗೂನ್ಯಾ ಹರಡದಂತೆ ಮುನ್ನೆಚ್ಚರಿಕೆ

ಬೆಂಗಳೂರು ನಗರದಲ್ಲಿ ಡೆಂಗೆ, ಚಿಕೂನ್‌ಗುನ್ಯಾದಂತಹ ರೋಗಗಳು ಹರಡದಂತೆ ಬಿಬಿಎಂಪಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ. ಈ ನಿಟ್ಟಿನಲ್ಲಿ ಆರೋಗ್ಯಾಧಿಕಾರಿಗಳ ಸಭೆ ಕರೆದು ಚರ್ಚೆ ನಡೆಸಲಾಗಿದೆ. ಸೊಳ್ಳೆಗಳು ಹರಡಬಹುದಾದ ಸೂಕ್ಷ್ಮ ಪ್ರದೇಶಗಳಲ್ಲಿ ಒಂದು ವಾರ್ಡಿಗೆ ಮೂವರು ಸಿಬ್ಬಂದಿ ಪ್ರತಿನಿತ್ಯ ಔಷಧಿಗಳನ್ನು ಸಿಂಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಮುಂದೆ ಈ ರೀತಿಯ ಪ್ರಕರಣಗಳು ದಾಖಲಾಗದಂತೆ ಆರೋಗ್ಯಾಧಿಕಾರಿಗಳು ಪ್ರತಿನಿತ್ಯ ಎಚ್ಚರಿಕೆ ವಹಿಸುವುದ ಮತ್ತು ಪ್ರತಿನಿತ್ಯ ಸಭೆ ನಡೆಸಿ ವರದಿಯನ್ನು ಮಹಾಪೌರರಿಗೆ ಸಲ್ಲಿಸಲು ಸ್ಪಷ್ಟ ಸೂಚನೆ ನೀಡಲಾಗಿದೆ.

## ಫ್ಲೈಓವರ್ ಕಾಮಗಾರಿ ವೀಕ್ಷಣೆ

ಶ್ರೀ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಪಕ್ಕದ ವೃಷಭಾವತಿ ಕಾಲುವೆ ಮೇಲೆ ನಿರ್ಮಾಣಗೊಳ್ಳುತ್ತಿರುವ ಫ್ಲೈಓವರ್‌ನ ಕಾಮಗಾರಿಯನ್ನು ವೀಕ್ಷಿಸಲಾಯಿತು. ಸುಮಾರು 22 ಕೋಟಿ ರೂ. ವೆಚ್ಚದಲ್ಲಿ ಈ ಕಾಮಗಾರಿಯನ್ನು ಬಿಬಿಎಂಪಿ ಕೈಗೆತ್ತಿಕೊಂಡಿದ್ದು ಇದೀಗ ಅಂತಿಮ ಹಂತ ತಲುಪಿದೆ. ಉಳಿದ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಿ ಶೀಘ್ರದಲ್ಲಿ ಸಾರ್ವಜನಿಕರಿಗೆ ಮುಕ್ತಗೊಳಿಸಲಾಗುವುದು.

ಯಶವಂತಪುರ– ಮಲ್ಲೇಶ್ವರ ನಡುವೆ ಸಿಎನ್‌ಆರ್ ರಾವ್ ವೃತ್ತದಲ್ಲಿ ನಡೆಯುತ್ತಿರುವ ಫ್ಲೈಓವರ್ ಕಾಮಗಾರಿ ಶೇ. 60ರಷ್ಟು ಪೂರ್ಣಗೊಂಡಿದ್ದು ನಿಧಾನ ಗತಿಯಲ್ಲಿ ಕಾಮಗಾರಿ ಕೈಗೊಂಡ ಸಂಸ್ಥೆಗೆ 50 ಲಕ್ಷ ರೂ. ದಂಡ ವಿಧಿಸಲಾಗಿದೆ ಹಾಗೂ ಜಂಟಿ ಸಹಭಾಗಿತ್ವದಿಂದ ಆ ಕಂಪೆನಿಯನ್ನು ಹೊರಗೆ ಹಾಕಲಾಗಿದೆ. ಬಾಕಿ ಉಳಿದ ಕಾಮಗಾರಿಯನ್ನು ಮುಗಿಸುವಂತೆ ಜಂಟಿ ಸಹಭಾಗಿತ್ವದ ಮತ್ತೊಂದು ಕಂಪೆನಿಗೆ ಸೂಚಿಸಲಾಗಿದ್ದು ಸೆಪ್ಟೆಂಬರ್ ವೇಳೆಗೆ ಮುಕ್ತವಾಗುವ ನಿರೀಕ್ಷೆಯಿದೆ.

## ಬಿಬಿಎಂಪಿ ನೌಕರರ ಸಂಘದ ಚುನಾವಣೆ

ಕಳೆದ . . . ವರ್ಷಗಳಿಂದ ನಡೆಯದೇ ಇದ್ದ ಬಿಬಿಎಂಪಿ ನೌಕರರ ಸಂಘದ ಚುನಾವಣೆಯನ್ನು ಶಾಂತಿಯುತವಾಗಿ, ಸೌಹಾರ್ದಯುತವಾಗಿ ಹಾಗೂ ಯಶಸ್ವಿಯಾಗಿ ನಡೆಸಲಾಯಿತು. ಸುಮಾರು 10ಕ್ಕೂ ಹೆಚ್ಚು ಸಂಘಗಳನ್ನು ಒಗ್ಗೂಡಿಸಿ ಅವರ ನಡುವಿನ ವೈಮನಸ್ಯವನ್ನು ದೂರಮಾಡುವ ಮೂಲಕ ಈ ಚುನಾವಣೆಯನ್ನು ನಡೆಸಲಾಯಿತು. ಇದರಿಂದಾಗಿ ನೌಕರರು ತಮ್ಮ



ಸಮಸ್ಯೆಗಳನ್ನು ಹಾಗೂ ಅಹವಾಲುಗಳನ್ನು ಸಂಬಂಧಪಟ್ಟವರ ಅವಗಾಹನೆಗೆ ತರಲು ಸೂಕ್ತ ವೇದಿಕೆ ಸೃಷ್ಟಿಯಾದಂತಾಗಿದೆ.

## ಬೃಹತ್ ಕಟ್ಟಡಗಳ ಮೇಲೆ ಪವನಯಂತ್ರ ಸ್ಥಾಪನೆ

ನಗರದಲ್ಲಿನ ವಿದ್ಯುತ್ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಹೊಸ ಯೋಜನೆಯೊಂದನ್ನು ರೂಪಿಸಲಾಗಿದೆ. ನಗರದಲ್ಲಿ ಪವನಶಕ್ತಿಯನ್ನು ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಬನ್‌ಮುಕ್ತ, ಪರಿಶುದ್ಧವಾದ ಹಾಗೂ ಉಚಿತ ವಿದ್ಯುಚ್ಛಕ್ತಿಯನ್ನು ಪಡೆಯಬಹುದಾಗಿದೆ. ಕರ್ನಾಟಕ ರಿನೀವಬಲ್ ಎನರ್ಜಿ ಡೆವಲಪ್‌ಮೆಂಟ್ ಲಿಮಿಟೆಡ್ ಹಾಗೂ ಬೆಸ್ಕಾಂ ಸಹಯೋಗದಲ್ಲಿ ಬೃಹತ್ ಕಟ್ಟಡಗಳ ಮಾಲೀಕರ ಮನವೊಲಿಸಿ ಪವನ ಯಂತ್ರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಈ ಯೋಜನೆಯನ್ನು ಪರೀಕ್ಷಾರ್ಥವಾಗಿ ಸರ್ಕಾರಿ ಹಾಗೂ ಬಿಬಿಎಂಪಿ ಕಟ್ಟಡಗಳ ಮೇಲೆ ಪವನಯಂತ್ರಗಳನ್ನು ಸ್ಥಾಪಿಸಲಾಗುವುದು. ಮೊದಲ ಹಂತದಲ್ಲಿ ಪಬ್ಲಿಕ್ ಯುಟಿಲಿಟಿ ಕಟ್ಟಡ, ಜಯನಗರ ಶಾಪಿಂಗ್ ಕಟ್ಟಡ ಮತ್ತು ಬಿಬಿಎಂಪಿ ಕೇಂದ್ರ ಕಚೇರಿಗಳ ಹಾಗೂ ನಂತರದ ಹಂತದಲ್ಲಿ ಎಲ್ಲಾ ಸರ್ಕಾರಿ ಕಟ್ಟಡಗಳ ಮೇಲೆ ಮೇಲೆ ಈ ಯಂತ್ರಗಳನ್ನು ಸ್ಥಾಪಿಸಲಾಗುವುದು. ಐದು ಮಹಡಿಗಳಿಗಿಂತಲೂ ಹೆಚ್ಚು ಎತ್ತರವಿರುವ ಕಟ್ಟಡಗಳ ಮೇಲೆ ಇದನ್ನು ಸ್ಥಾಪಿಸಬೇಕಿದೆ. ಈ ಯಂತ್ರಗಳ ಮೂಲಕ ಪಡೆದ ವಿದ್ಯುತ್ ಅನ್ನು ಎಸ್ಕಲೇಟರ್‌ಗಳು, ಲಿಫ್ಟ್‌ಗಳ ಚಾಲನೆ ಹಾಗೂ ಬೆಳಕಿನ ವ್ಯವಸ್ಥೆಗೆ ಬಳಸಿಕೊಳ್ಳಲಾಗುವುದು.

ಈ ಯೋಜನೆಯ ಮೊದಲ ಹಂತದ ಚಾಲನೆಗಾಗಿ ಬಜೆಟ್‌ನಲ್ಲಿ 1 ಕೋಟಿ ರೂ. ನೀಡಲು ನಿಗದಿಪಡಿಸಲಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರದ ನೂತನ ಮತ್ತು ನವೀಕರಿಸಬಹುದಾದ ಶಕ್ತಿ ಇಲಾಖೆಯಿಂದ ಆರ್ಥಿಕ ಅನುದಾನವನ್ನು ನಿರೀಕ್ಷಿಸಲಾಗಿದೆ.



ಹುತಾತ್ಮರ ಕುಟುಂಬದ
ಸದಸ್ಯರಿಗೆ ಗೌರವಾರ್ಪಣೆ



ಕಾರ್ಗಿಲ್ ಹುತಾತ್ಮರ ದಿನಾಚರಣೆ
ನಿಮಿತ್ತ ವೀರಯೋಧರ ಪ್ರತಿಮೆಗೆ
ಮಹಾಪೌರರಿಂದ ನಮನ